ಇಂದು ದಿನಾಂಕಃ03.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಕೆ ಬಿ ಬಿ ವಕೀಲರಿಂದಃ

ನಿಪಿ-1 ದಾಖಲೆಗೆ ಸಂಬಂದಿಸಿದಂತೆ ನಾನು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ. ನಿಪಿ-1 ದಾಖಲೆಯನ್ನು ರಸ್ತೆ ನಿಗಮದವರು ನಮಗೆ ನೀಡಿರುತ್ತಾರೆ. ನಿಪಿ-1 ರಂತೆ ನಿಗಮದವರು ಕೇಳಿರುವ ದಾಖಲೆಗಳನ್ನು ನಾನು ಅವರಿಗೆ ಒದಗಿಸಿರುತ್ತೇನೆ. ಆ ರೀತಿ ನಿಗಮಕ್ಕೆ ದಾಖಲೆಗಳನ್ನು ಹಾಜರಪಡಿಸಿರುವ ಬಗ್ಗೆ ಅವರಿಂದ ನಾನು ಯಾವುದೇ ಹಿಂಬರಹವನ್ನು ಪಡೆದುಕೊಂಡಿರುವುದಿಲ್ಲ. ನಮ್ಮ ಮತ್ತು ನಿಗಮದ ನಡುವೆ ಆದ ಒಪ್ಪಂದ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ಸದರಿ ರಸ್ತೆ ನಿಗಮಕ್ಕೆ ಒಟ್ಟು 7 ಗುಂಟೆ ಜಮೀನು ಹೋಗಿರುತ್ತದೆ ಎಂದರೆ ಸರಿ. ವಾದ ಪತ್ರದ 4 ನೇ ಪ್ಯಾರಾದ ಕೊನೆಯ ಎರಡು ಸಾಲಿನಲ್ಲಿ ನಾನು ಹಣದಲ್ಲಿ ಭಾಗ ಹಾಗೂ ಆಸ್ತಿಯಲ್ಲಿ ಎರಡನ್ನೂ ಕೋರಿ ಮಾಗಣಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಈಗ ಹಣದಲ್ಲಿ ಮಾತ್ರ ಪಾಲು ಕೇಳುತ್ತಿದ್ದೇನೆ ಎಂದು ನುಡಿದಿರುತ್ತಾರೆ.

2. ದಾವಾ ಆಸ್ತಿಯ ಶೆಡ್ಯೂಲ್ ನಲ್ಲಿ ದಾವಾ ಆಸ್ತಿಯ ಸಂಖ್ಯೆಯನ್ನು ನಮೂದಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಪ್ರತಿವಾದಿ ಆಸ್ತಿಯ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ಮಾದೇವಪ್ಪ ಮಾಳೂರು ರವರ ಆಸ್ತಿ, ಪಶ್ಚಿಮಕ್ಕೆ ದಿಗ್ಗೆಮ್ಮ ನ ಆಸ್ತಿ, ಉತ್ತರಕ್ಕೆ ಓಮನಗೌಡ ರವರ ಆಸ್ತಿ ಎಂದರೆ ನನ್ನ ತಂದೆಯ ಆಸ್ತಿ, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ದಿಗ್ಗೆಮ್ಮ ಎಂಬುವವರು ಈಗ ಪೋತಿಯಾಗಿರುತ್ತಾರೆ. ದಿಗ್ಗೆಮ್ಮ ನವರಿಗೆ ಸೇರಿದ 3 ಎಕರೆ 1 ಗುಂಟೆ ಜಮೀನನ್ನು ರಾಮನಗೌಡ ಮತ್ತು ಓಮನಗೌಡ ರವರು ಸಮನಾಗಿ ಹಂಚಿಕೊಳ್ಳಬೇಕೆಂದು ಡ.ನಂ.1669/88 ರಂತೆ ನಮೂದಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಓಮನಗೌಡರ ರವರ ಹಿರೀಮಗಳು ನಾನು ಆಗಿರುತ್ತೇನೆ. ನನನಿಂತ ದೊಡ್ಡವರು ಯಾರು ಇರುವುದಿಲ್ಲ. ನಾನು ದಿಗ್ಗೆವ್ವನವರ ಸಾಕು ಮಗಳು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ನಾನು ದಿಗ್ಗೆವ್ವನ ಸಾಕು ಮಗಳು ಅಲ್ಲ ಹಾಗೂ ಅವರು ಜೀವಂತ ಇದ್ದಾಗ ಆಕೆಯನ್ನು ಆರೈಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

3. ನಮ್ಮ ಜಮೀನಿನಲ್ಲಿ ಇಂತಿಷ್ಟೇ ಪ್ರಮಾಣದಲ್ಲಿ ಜಮೀನು ರಸ್ತೆ ನಿಗಮಕ್ಕೆ ಹೋಗಿದೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ನಾನು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಆ ರೀತಿ ವಾದ ಪತ್ರದಲ್ಲಿ ನಮೂದಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ದಿಗ್ಗೆವ್ವನ ಆಸ್ತಿಗೆ ಹಕ್ಕು ದಾರಳು ಅಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಆಸ್ತಿಯಲ್ಲಿ ಮಾತ್ರ ಪಾಲನ್ನು ಕೇಳಲು ಹಕ್ಕುದಾರಳಾಗಿದ್ದು ಬೇರಯವರಿಗೆ ಸೇರಿದ ಆಸ್ತಿಯಲ್ಲಿ ನನಗೆ ಪಾಲನ್ನು

ಕೇಳಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ಹೆದರಿಸಿ ಬೆದರಿಸಿ ನನಗೆ ಹಣ ಬರಬೇಕು ಎಂದು ಹೇಳಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಗೆ ಸಮಂಜಸವಾದ ನ್ಯಾಯಾಲಯದ ಶುಲ್ಕವನ್ನು ತುಂಬಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.